## ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು, ಮಡಿಕೇರಿ

## ಸ್ಪೆಷಲ್(ಕರಪ್ಷನ್) ಕೇಸ್‌ಃ 61/2016

ಪ್ರಾ.ಸಾಃ 1
ಚಾ.ಸಾಃ 1

ಸಾಕ್ಷಿದಾರರ ಹೆಸರು : ವಿಕ್ಟರ್ ಸೈಮನ್

ತಂದೆಯ ಹೆಸರು : ರಬೀಂದ್ರ ಸೈಮನ್

ವಯಸ್ಸು : 45 ವರ್ಷ

ವೃತ್ತಿ : ಪೊಲೀಸ್ ಇನ್‌ಸ್ಪೆಕ್ಟರ್,
ಕೋಸ್ಟಲ್ ಸೆಕ್ಯುರಿಟಿ ಪೊಲೀಸ್, ಉಡುಪಿ

ವಾಸ : ಉಡುಪಿ

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕಃ 05.04.2022**

**ಮುಖ್ಯವಿಚಾರಣೆ ಸರ್ಕಾರದ ಪರ ವಿಶೇಷ ಅಭಿಯೋಜಕರಿಂದಃ**

1. ದಿನಾಂಕ 22.09.2012 ರಿಂದ 25.04.2013 ರವರೆಗೆ ನಾನು ಪ್ರಭಾರ ಪೊಲೀಸ್ ಇನ್‌ಸ್ಪೆಕ್ಟರ್, ಮಡಿಕೇರಿ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ಕೆಲಸ ಮಾಡುತ್ತಿದ್ದೆನು.

2. ಬಲ್ಲ ಮೂಲಗಳಿಂದ ದೊರೆತ ಮಾಹಿತಿ ಮೇರೆಗೆ ಆರೋಪಿಯು ಗೊತ್ತಾದ ಆದಾಯಕ್ಕಿಂತ ಹೆಚ್ಚುವರಿಯಾಗಿ ಅಕ್ರಮವಾಗಿ ಆಸ್ತಿಗಳನ್ನು ಅರ್ಜಿಸಿರುವ ಬಗ್ಗೆ ಸೋರ್ಸ್ ಮಾಹಿತಿ ನೀಡಿರುತ್ತೇನೆ. ಆ ಸಮಯದಲ್ಲಿ ಆರೋಪಿಯು ಬೆಂಗಳೂರಿನ ಕಬ್ಬನ್ ಪಾರ್ಕ್ ಸಂಚಾರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ನಿರೀಕ್ಷಕರೆಂದು ಕೆಲಸ ಮಾಡುತ್ತಿದ್ದರು. ಆರೋಪಿಯು 1992 ರಿಂದ 2013 ರವರೆಗಿನ ಸೇವಾವಧಿಯಲ್ಲಿ ಗಳಿಸಿರುವ ಅಕ್ರಮ ಆಸ್ತಿಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ವರದಿ ನೀಡಿರುತ್ತೇನೆ. ಸದರಿ ಅವಧಿಯಲ್ಲಿ ಆರೋಪಿಯು ರೂ. 1,32,77,986/- ಮೌಲ್ಯದ ಆಸ್ತಿಯನ್ನು ಅರ್ಜಿಸಿರುತ್ತಾರೆ. ಆರೋಪಿಯ ಖರ್ಚು ವೆಚ್ಚಗಳ ಅಂದಾಜು ಮೌಲ್ಯ ರೂ. 85,00,000/- ಗಳಾಗಿರುತ್ತದೆ. ಆರೋಪಿಯ ಆಸ್ತಿ ಅರ್ಜನೆ ಹಾಗೂ ಖರ್ಚು ವೆಚ್ಚಗಳ ಅಂದಾಜು ಒಟ್ಟು ಮೌಲ್ಯ ರೂ. 2,17,77,986/- ಗಳಾಗಿರುತ್ತದೆ. ಆರೋಪಿಯ ಸೇವಾವಧಿಯ ಗೊತ್ತಾದ ಬಲ್ಲ ಮೂಲಗಳ ಅಂದಾಜು ಆದಾಯ ರೂ. 95,02,500/- ಗಳಾಗಿರುತ್ತದೆ. ಆರೋಪಿಯು ಗಳಿಸಿರುವ ಹೆಚ್ಚುವರಿ ಆಸ್ತಿಪಾಸ್ತಿಗಳ ಅಂದಾಜು ಮೌಲ್ಯ ರೂ. 1,22,75,486/- ಗಳಾಗಿರುತ್ತದೆ. ಆರೋಪಿಯು

ಅರ್ಜಿಸಿರುವ ಹೆಚ್ಚುವರಿ ಆಸ್ತಿಪಾಸ್ತಿಗಳ ಶೇಕಡಾವಾರು ಪ್ರಮಾಣ 129.18% ಗಳಾಗಿರುತ್ತದೆ. ಆರೋಪಿಯು ಗೊತ್ತಾದ ಆದಾಯಕ್ಕಿಂತ ಹೆಚ್ಚುವರಿಯಾಗಿ ಅಕ್ರಮವಾಗಿ ಆಸ್ತಿಗಳನ್ನು ಅರ್ಜಿಸಿರುವ ಬಗ್ಗೆ ಹಾಗೂ ಕ್ರಮಬದ್ಧವಾದ ತನಿಖೆಯು ಅವಶ್ಯಕವಾಗಿರುವುದು ಕಂಡುಬಂದಿದ್ದರಿಂದ ಪರಿಶೀಲನೆ ಹಾಗೂ ಆದೇಶಕ್ಕಾಗಿ ಸೋರ್ಸ್ ಮಾಹಿತಿ ವರದಿಯನ್ನು ದಿನಾಂಕ 17.04.2013 ರಂದು ಚಾಸಾ-87 ಇವರಿಗೆ ನೀಡಿರುತ್ತೇನೆ. ಈಗ ನೋಡುತ್ತಿರುವ ಸೋರ್ಸ್ ಮಾಹಿತಿ ವರದಿ ಅದೇ ಇದ್ದು, ಅದರಲ್ಲಿಯ ಸಹಿ ನನ್ನದೇ ಇದ್ದು, ಸೋರ್ಸ್ ಮಾಹಿತಿ ವರದಿಯನ್ನು **ನಿಪಿ-1** ಹಾಗೂ ಸಹಿಯನ್ನು **ನಿಪಿ-1(ಎ)** ಎಂದು ಗುರುತಿಸಲಾಯಿತು.

**<u>ಪಾಟೀಸವಾಲು ಆರೋಪಿ ಪರ ಶ್ರೀ ಪಿ.ಕೆ.ಎಸ್, ವಕೀಲರಿಂದ:</u>**

3. ನಾನು ಸೋರ್ಸ್ ಮಾಹಿತಿ ವರದಿಯನ್ನು ಸಲ್ಲಿಸುವ ಪೂರ್ವ 3 ತಿಂಗಳವರೆಗೆ ಮಾಹಿತಿಯನ್ನು ಸಂಗ್ರಹಿಸಿರುತ್ತೇನೆ. ಆ ರೀತಿ ಮಾಹಿತಿ ಸಂಗ್ರಹಿಸಿರುವ ಬಗ್ಗೆ ಠಾಣಾ ದಿನಚರಿಯಲ್ಲಿ ನಮೂದು ಮಾಡಿರುವುದಿಲ್ಲ. ಈ ಬಗ್ಗೆ ಬೇರೆ ಸಿಬ್ಬಂದಿಯವರಿಗೆ ಮಾಹಿತಿ ನೀಡಿರುವುದಿಲ್ಲ. ನಾನು ಸೋಮವಾರಪೇಟೆ, ಮಡಿಕೇರಿ, ಬೆಂಗಳೂರು ಮುಂತಾದವುಗಳಿಗೆ ಭೇಟಿ ನೀಡಿರುತ್ತೇನೆ. ಆ ರೀತಿ ಭೇಟಿ ನೀಡಿದ ಬಗ್ಗೆ ಜೀಪಿನ ಲಾಗ್ ಪುಸ್ತಕದಲ್ಲಿ ನಮೂದು ಮಾಡಲಾಗಿದೆ. ಪ್ರಾಥಮಿಕ ತನಿಖೆಯ ಸಂದರ್ಭದಲ್ಲಿ ಅಧಿಕೃತವಾಗಿ ಬೇರೆ ಕಛೇರಿಗಳಿಗೆ ಪತ್ರ ವ್ಯವಹಾರ ಮಾಡಿರುವುದಿಲ್ಲ. ಆರೋಪಿಯ ಖರ್ಚು-ವೆಚ್ಚಗಳ ಅಂದಾಜು ಮೌಲ್ಯ ರೂ.85,00,000/- ಗಳೆಂದು ಊಹೆಯ ಆಧಾರದ ಮೇಲೆ ಮಾಡಲಾಗಿದೆ. ಪ್ರಾಥಮಿಕ ತನಿಖೆಯ ಸಂದರ್ಭದಲ್ಲಿ ಬೇರೆ ವ್ಯಕ್ತಿಗಳನ್ನು ವಿಚಾರಣೆ ಮಾಡಿಲ್ಲ. ಆರೋಪಿಯ ನಾದಿನಿಯಾದ ಕು. ಕೆ ಎ ಕಮಲ ಇವರ ಹೆಸರಿನಲ್ಲಿ ಆಸ್ತಿ ಇರುವ ಬಗ್ಗೆ ಅವರ ಪ್ಯಾನ್ ಕಾರ್ಡು ಹಾಗೂ ಆದಾಯ ತೆರಿಗೆ ರಿಟರ್ನ್ಸ್ ಇವುಗಳ ಆಧಾರದ ಮೇಲೆ ತನಿಖೆ ಮಾಡಿರುತ್ತೇನೆ. ವರದಿ ಸಲ್ಲಿಸಿದ ನಂತರ, ಈ ಪ್ರಕರಣದ ತನಿಖೆಯ ಯಾವುದೇ ಹಂತದಲ್ಲಿ ನಾನು ಪಾಲ್ಗೊಂಡಿರುವುದಿಲ್ಲ. ತನಿಖಾಧಿಕಾರಿಗಳು ನನಗೆ ಬರಮಾಡಿಕೊಂಡು ಸೋರ್ಸ್ ಮಾಹಿತಿಯ ಬಗ್ಗೆ ಯಾವುದೇ ಹೆಚ್ಚಿನ ಮಾಹಿತಿಯನ್ನು ಕೇಳಿರುವುದಿಲ್ಲ. ಸೋರ್ಸ್ ಮಾಹಿತಿ ವರದಿಯಲ್ಲಿರುವ ವಿಷಯಗಳೆಲ್ಲಾ ಖಚಿತವಾಗಿ ಸತ್ಯವಾಗಿರುತ್ತವೆ ಎಂಬುದನ್ನು ಹೇಳಲು ಆಗುವುದಿಲ್ಲ ಎಂದರೆ ಸುಳ್ಳು. ನಾನು ಆರೋಪಿಯೊಂದಿಗೆ ಸಹೋದ್ಯೋಗಿಯಾಗಿ ಕೆಲಸ ಮಾಡಿರುವುದಿಲ್ಲ. ಪ್ರಾಥಮಿಕ ತನಿಖೆಯ ಸಂದರ್ಭದಲ್ಲಿ ಆರೋಪಿ ಹಾಗೂ ಅವರ ಸಂಬಂಧಿಕರಲ್ಲಿ ವ್ಯಾಜ್ಯಗಳಿರುವ ಬಗ್ಗೆ ಕಂಡುಬಂದಿತ್ತು. ಸೋರ್ಸ್ ಮಾಹಿತಿ ವರದಿಯೊಂದಿಗೆ ನಾನು ಜೆರಾಕ್ಸ್ ದಾಖಲೆಗಳನ್ನು ಸಲ್ಲಿಸಿದ್ದೆನು. ಸೋರ್ಸ್ ಮಾಹಿತಿ ವರದಿಯಲ್ಲಿ ಆರೋಪಿಗೆ

ಸಂಬಂಧಪಡದ ಆಸ್ತಿಗಳನ್ನು ಸೇರಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಕುಟುಂಬಸ್ಥರ ಆಸ್ತಿ ಮೌಲ್ಯಗಳನ್ನು ಹೆಚ್ಚುವರಿಯಾಗಿ ಸೋರ್ಸ್ ಮಾಹಿತಿ ವರದಿಯಲ್ಲಿ ನಮೂದು ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಖರ್ಚು-ವೆಚ್ಚಗಳ ಬಗ್ಗೆ ಹೆಚ್ಚುವರಿಯಾಗಿ ಸೋರ್ಸ್ ಮಾಹಿತಿ ವರದಿಯಲ್ಲಿ ನಮೂದು ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಕಾನೂನುಬದ್ದ ಆದಾಯಗಳನ್ನು ನಾನು ಪರಿಗಣಿಸಿಲ್ಲ ಎಂದರೆ ಸುಳ್ಳು. ಆರೋಪಿಯ ಶೇಕಡಾವಾರು ಅಕ್ರಮ ಆಸ್ತಿಯನ್ನು ಹೆಚ್ಚು ತೋರಿಸಲು ಮೇಲಾಧಿಕಾರಿಗಳ ಒತ್ತಡದಿಂದ ಯಾವುದೇ ತನಿಖೆಯನ್ನು ಮಾಡದೇ ಸುಳ್ಳು ಸೋರ್ಸ್ ಮಾಹಿತಿ ವರದಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-
ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ